Registered No.
M —1299

"ಸತ್ಯವಾದಿ"

(ವಾರ್ಷಿಕ ಚಂದ 0-12-0) ಪ್ರತಿಬುಧವಾರ ಪ್ರಕಟಿಸಲ್ಪಡುವುದು. (ಲಂಚವೆಚ್ಚ ಸೇರಿ 1-10-0)

ಸಂಪುಟ 2] ಬುಧವಾರ 2 ನೇ ಜುಲೈ 1919. [ಸಂಚಿಕೆ 36

ಸತ್ಯಮೇವ ಜಯತೇ

(ಗುಣವಾಗದಿದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಪೆದ ನೋಧ್ಲವ ಗುಳಿಗೆ

ಜನನೇಂದ್ರಿಯದ ಶಿಥಿಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಪುನೋತ್ಪಾದಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರಹದ ಬಕ್ಕೆಗಳು ಹುಣ್ಣುಗಳು, ಹಿತ್ತದ ಬಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಅಲ್ಪತ್ವರ್ಯ ಗುಣವಾಗಿ ಶರೀರಕ್ಕೆ (ನೀರೊಗತ್ತವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ) ಶಕ್ತಿಯೂ ಉಂಟಾಗುತ್ತದೆ ಬಬ್ಬರಿಗೆ ೬ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತಾರಿ ತೈಲವು.

ಪುರುಷನ ಇಂದ್ರಿಯಕ್ಕೆ ಹುಟ್ಟುವದಿಂದಮುಂಬಾದ ಶಿಥಿಲತೆ, ನಿಬ್ಬಲತೆ ಮೊದಲಾದವು ಶಕ್ತ ಬಾಹ್ಯೋಚ್ಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನುಂಟು ಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದಸೋಧ್ಲವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿಂದಕ್ಕೆ ೨ ರೂ. ೧೫ ಜಿಣೆ. ಅನುಪಾನ ಪತ್ರಿಕೆ ಔಷಧದ ಸಂಗಡ. ಪಿಪಾಲು ಖರ್ಚು ಬೇರೆ. ಬಂದಾಣಿ ಸ್ಟ್ಯಾಂಪು ಕಳುಹಿಸಿದರೆ ಕ್ಯಾಟಲಾಗ್ ಪುಕಟೆ.

ವಿಳಾಸ—ವೈದ್ಯ ಜೆ. ಎಲ್. ಬಿಷೋತಿ ಮತ್ತು ಕಂಪನಿ,

ಪೋಸ್ಟ್ ಖನವಾಸಿ ಉತ್ತರಕನ್ನಡ.

ಸುಲಭಕ್ರಯ! ಪರೀಕ್ಷಿಸಿರೆಂದು. ಬಿಡ್ಡೀಸಮಯರು!!

—o—

ನಮ್ಮ ಕಂಪನಿಯಲ್ಲಿ ಒಳ್ಳೆಯ ಪಿತ್ತಾಳೆಯಿಂದ ತಯಾರಾದ ಅತಿ ಸುಂದರವಾದ ಮಕ್ಕಳ ಆಟದ ಸಾಮಾನು ಇದರಲ್ಲಿ ಕಂಡಬೆಲೆಗೆ ಸಿದ್ಧವಾಗಿ ಬಂದಾವರ್ತಿ ಕರಿಸಿದವರು ಮನಸ್ಸಿನ ಆನಂದವು ಹೇಳಲಸಾಧ್ಯ.

ಇದರ ಬೆಲೆ.

32 ಸಾಮಾನುಗಳುಳ್ಳ ದೊಡ್ಡ ಸೆಟ್ಟು 1 ಕ್ಕೆ 3—8—0

ಡಿಟೋ, ಮಧ್ಯಸೆಟ್ಟು——2—0—0

ಡಿಟೋ ಸಣ್ಣಸೆಟ್ಟು——1—4—0

ಸಿದವರಿಗೆ ಪಟ್ಟು ಜೀತಾಂಬಾರಿ ಕ್ಯಾಟಲಾಗು ಇನಾಮು

ಪ್ಯಾಕಿಂಗ್ ಫೋಸ್ಟೇಜ್ ಪ್ರತ್ಯೇಕ.

—ಘನಾನಿ ಕಂಪನಿ, ಸಿಲ್ಕ್‌ಮರ್ಚೆಂಟ್ಸ್,

ಬನಾರಸ್ ಸಿಟಿ.

ಮಾಫಿ! ಪೋಷ್ಟು ಖರ್ಚು. ಮಾಫಿ!!

ಈ ನಕ್ಷೆಯಲ್ಲಿ ಕಾಣುವ ಪೇನಾ ಇಂಕಿ ಇದ್ದರೆ ಬರೆಯುವದು. ಪ್ರತಿ ಒಬ್ಬರಿಗೂ ಬರಿಯಲು ಅನುಕೂಲವಾಗಿದೆ. ಈ ತೆರಗಳುವರಿಗೂ ಪೋಷ್ಟು ಖರ್ಚು ಮಾಫಿ. ಕ್ರಯ ಪೇನಾ 1 ಕ್ಕೆ ರೂ. 1—0—0

ವಿಳಾಸ:—ಎ. ಕೆ. ಪೆನ್ ಅಂಡ್ ಕೊ,

24, ವಿನಾಯಕನೇಸ್ತ್ರಿ ಪಿ ರಿ, ಮದರಾಸ.

ವಿದ್ಯಾ

—o—

(ಸಂಪುಟ 2 ಸಂಚಿಕೆ 34 ರಲ್ಲಿ ಮುಂದರಿಸಿದ್ದು.)

ಖಾತಕ ಮಹಾಶಯನೇ!

ಹಿಂದಿನ ಮೂರು ಸಂಚಿಕೆಗಳಲ್ಲಿಯೂ ಕಷ್ಟಪಟ್ಟು ವಿದ್ಯೆಯನ್ನು ಆರ್ಜಿಸಬೇಕೆಂಬದಾಗಿ ಹೇಳಿದ್ದಾಯಿತು. ಈಗ ವಿದ್ಯಾರ್ಜನೆಯಿಂದ ಪ್ರಯೋಜನವೇನೆಂಬುದನ್ನು ತಿಳಿಕೊಳ್ಳೋಣ! ಯಾರಲ್ಲಿ ವಿಶೇಷವಾಗಿ ವಿದ್ಯಾಭಿಮಾನಿಯಾದ ಸರಸ್ವತಿಯು ಅನುಗ್ರಹವನ್ನು ಮಾಡಿರುವಳೋ? ಯಾವಾತನು ಸದ್ವಿದ್ಯಾಸಾಗರದಲ್ಲಿ ಮಗ್ನನಾಗಿರುವನೋ? ಯಾವನ ಮನಸ್ಸು ವಿವೇಕಾವಿವೇಕಜ್ಞಾನವನ್ನು ತಿಳಿದುಕೊಳ್ಳಲು ಸಮರ್ಥವಾಗಿರುವದೋ? ಅಂಥವನು ವಿದ್ವಾಂಸನೆಂದು ಕರೆಯಲು ಅರ್ಹನಾಗಿರುವನು. ,, ವಿದ್ವಾನ್ ಸರ್ವತ್ರ ಪೂಜ್ಯತೆ'' ಎಂಬುದಕ್ಕೆ ಮೇಲೆ ಉದಾಹರಿಸಲ್ಪಟ್ಟ ಗುಣಗಣಾವಳಿಗಳಿಂದ ಯುಕ್ತನಾದವನು ಯಾವ ಪಟ್ಟಣದಲ್ಲಿಯೂ, ಯಾವ ಹಳ್ಳಿಯಲ್ಲಿಯೂ, ಯಾವಾಗಲೂ ಎಲ್ಲರಿಂದಲೂ ಪೂಜಿಸಲ್ಪಡುತ್ತಾನೆ ಮತ್ತು ವಿದ್ಯೆಯು, ,, ವಿದ್ಯಾದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಂ || ಪಾತ್ರತ್ವಾದ್ಧನಮಾಪ್ನೋತಿ ಧನಾದ್ಧರ್ಮಂ ತತಃ ಸುಖಂ ||'' ಮನುಷ್ಯರಲ್ಲಿ (ವಿನಯ) ಅಂದರೆ ನಮ್ರಭಾವವನ್ನು ಉಂಟು ಮಾಡುತ್ತದೆ. ಈ ರೀತಿ ಬಳ್ಳಿ ನಡತೆಯಲ್ಲಿ ಯಾವಾಗ ಇರುತ್ತಾನೊ? ಆವನು ಎಲ್ಲರಿಂದಲೂ ಇವನು ಯೋಗ್ಯನಾಗಿದ್ದಾನೆಂಬದಾಗಿ ಹೊಗಳಿಕೊಳ್ಳಲ್ಪಡುತ್ತಾನೆ. ಬಳ್ಳಿ ನಡತೆಯಲ್ಲಿದ್ದುಕೊಂಡು ಯೋಗ್ಯರಾದವರನ್ನು ಸನ್ಮಾನಿಸಿದಲ್ಲಿ, ಯಾರಾದರೂ ದ್ರವ್ಯವನ್ನು ಕೊಟ್ಟೇಕೊಡುತ್ತಾರೆ. ದ್ರವ್ಯಪ್ರಾಪ್ತಿ ಯಾವಾಗ ಉಂಟಾಯಿತೊ ಆವಾಗ ವಿದ್ಯಾವಂತರುಗಳಿಗೆ ವಿಶೇಷವಾದ ಧರ್ಮ ಮಾಡಬೇಕೆಂಬದಾಗಿ ಬುದ್ಧಿಯೂ ಅದರ ಜೊತೆಯಲ್ಲಿಯೇ ಉಂಟಾಗುವದು. ಸನ್ಮಾರ್ಗಪ್ರವೃತ್ತಿಯಾಗಿ ಧರ್ಮ ಮಾಡುವದರಿಂದ ಮೋಕ್ಷವೂ ಉಂಟಾಗುವದೆಂಬ ವಿಷಯವನ್ನು ನಾನು ಹೇಳಬೇಕಾದುದೇ ಇಲ್ಲ

ಮನೆಯಲ್ಲಿ ಕೂಡಿಸಿಟ್ಟ ಹಣವನ್ನು ಕಳ್ಳರು ಕದಿಯುವದೂ, ದ್ವೇಷಿಗಳು ಅಪಹರಿಸುವದೂ, ದಾಯಾದಿಗಳ ಪಾಲಿಗೆ ಹೋಗುವದೂ, ವಾಡಿಕೆಯಲ್ಲಿರತಕ್ಕ ವಿಷಯವಾಗಿದೆ. ಆದರೆ ತಲೆಯೆಂಬ ಗೂಡಿನಲ್ಲಿ ತುಂಬಿಸಿಟ್ಟ ವಿದ್ಯಾರೂಪವಾದ ದ್ರವ್ಯವು, ಜೋರಿಂದ ಕೆದಿಯಲಿಕ್ಕೂ, ದ್ವೇಷಿಗಳಿಂದ ಅಪಹರಿಸಲಿಕ್ಕೂ, ದಾಯಾದಿಗಳಿಗೋಸುಗ ಭಾಗವಾಗಲಿಕ್ಕೂ, ಬರತಕ್ಕುದಲ್ಲ. ಆದ್ದರಿಂದ ಇದೊಂದು ಅತ್ಯುತ್ಕೃಷ್ಟವಾದ ದ್ರವ್ಯಸಮೂಹವೆಂಬದಾಗಿ ಹೇಳಬಹುದು. ಮತ್ತು ಯಾವನು ಕೂಡ ಉಡಿಗೆ ತೊಡಿಗೆ, ಆಭರಣಗಳಿಂದ, ಎಷ್ಟು ಅಲಂಕರಿಸಲ್ಪಟ್ಟವನಾದಾಗ್ಯೂ ವಿದ್ಯಾರಹಿತನಾಗಿದ್ದರೆ ಅದೊಂದು ಅಲಂಕಾರವೇ ಅಲ್ಲ. ವಿದ್ಯೆಯನ್ನು ಬಿಟ್ಟರೆ ಮನುಷ್ಯರಿಗೆ ಭೂಷಣಪ್ರಾಯವಾದುದು ಬೇರೆ ಯಾವದೂ ಇರುವದಿಲ್ಲ. ಅಷ್ಟುಮಾತ್ರವಲ್ಲದೆ ಅದು ನಮಗೆ ಯಶಸ್ಸನ್ನೂ, ಸುಖವನ್ನೂ, ಭೋಗವನ್ನೂ ಕೂಡ, ಕೊಡುವಂಥಾದ್ದಾಗಿರುವದು. ಅದು ಪರದೇಶಗಮನ ಕಾಲದಲ್ಲಿ ನಮಗೆ ಸಹಕಾರಿಗಳಾದ ಜ್ಞಾತಿ ಜನಗಳಂತೆಯೂ, ಇರುವಂಥಾ ಒಂದು ಅಮೂಲ್ಯವಾದ ಮತ್ತು ಅದೃಶ್ಯವಾದ ಪದಾರ್ಥವಾಗಿದೆ.

ಏಕಾದ್ವಶಗುಣವಿಶಿಷ್ಟವಾದ ವಿದ್ಯೆಯು ಯಾರಲ್ಲಿ ಇರುವದಿಲ್ಲವೋ? ಅಥವಾ ಅದನ್ನು ಅಭ್ಯಾಸಮಾಡುವದಕ್ಕೋಸ್ಕರ ಯಾರು ವಿಶೇಷವಾಗಿ ಉತ್ತೇಜನವನ್ನು ಕೊಡುವದಿಲ್ಲವೋ? ಅಂಥವರು ಪಶುಗಳಿಗೆ ಸಮಾನರೆಂಬದಾಗಿ ಯಾರೂ ಹೇಳದಿರಲಾರರು.

ವಿದ್ಯೆಯು, ನಮ್ಮನ್ನು ರಕ್ಷಣೆಮಾಡುವದರಲ್ಲಿ ಜನನಿಯಂತೆಯೂ ಹಿತವಾದ ಬುದ್ಧಿಮಾರ್ಗವನ್ನು ಉಪದೇಶಿಸುವದರಲ್ಲಿ ಜನಕನಂತೆಯೂ, ಮನಸ್ಸಿನ ಸಂತಾಪವನ್ನು ಪರಿಹಾರಮಾಡಿಸುವದರಲ್ಲಿ ಪತ್ನಿಯಂತೆಯೂ, ಆಚರಿಸುವಂಥಾದ್ದಾಗಿದೆ. ಮತ್ತು ಅದು ದೇಶದಿಕ್ಕುಗಳಲ್ಲಿಯೂ ನಮಗೆ ಕೀರ್ತಿಯನ್ನು ಉಂಟುಮಾಡುವಂಥಾದ್ದಾಗಿದೆ. ಮತ್ತು ವಿಶೇಷವಾದ ದ್ರವ್ಯಾರ್ಜನೆಯನ್ನು ಮಾಡಿಸುವದು ಮಾತ್ರವಲ್ಲದೆ ಇತರ ಯಾವ ಅಭೀಷ್ಟವನ್ನು ಕೊಡುವದರಲ್ಲಿಯೂ ಕಲ್ಪವೃಕ್ಷದಂತೆ ಆಚರಿಸುವಂಥಾದ್ದಾಗಿದೆ. ಇದರಿಂದಲೇ "ಮಾತೇವ ರಕ್ಷತಿ ಪಿತೇವ ಹಿತೇಸಿಂಯುತ್ತೆ ಕಾಂತೇವ ಚಾಜಿರಮಯತ್ಯಪನೀಯಖೇದಂ ॥ ಕೀರ್ತಿಂಚ ದಿಕ್ಷು ವಿತನೋತಿ ತನೋತಿ ವಿಕ್ತಂಕಿಂ ಪಾನಸಾಧಯತಿ ಕಲ್ಪಲತೇ ನಿದಾ್ಯ ॥ ೧ ॥" ಎಂಬದಾಗಿ ಉದಾಹರಿಸಿದ್ದಾರೆ. ಆದ್ದರಿಂದ ಸಮಸ್ತರೂ ಸರ್ವಸಾಮರ್ಥ್ಯವಾದ ವಿದ್ಯೆಯನ್ನು ಗುರುಹಿರಿಯರಲ್ಲಿ ಭಕ್ತಿಯುಕ್ತರಾಗಿಯೂ, ಶ್ಲಾಘನೀಯವಾದ ನಡತೆಯಲ್ಲಿ ಆಸಕ್ತಿಯುಳ್ಳವರಾಗಿಯೂ ಮುಂದೆ ದೇಶಾಭಿವೃದ್ಧಿಯ ಮೇಲೆ ದೃಷ್ಟಿಯನ್ನಿಟ್ಟುಕೊಂಡು ಅಭ್ಯಾಸ ಮಾಡುವಂತಹವರಾಗಿಯೂ ಇರತಕ್ಕದ್ದು. ಈ ರೀತಿಯಾಗಿ ಇದ್ದದ್ದೇಯಾದರೆ ಸರ್ವರಿಂದಲೂ ಪೂಜಿತರಾಗಿ ಭೂಮಿಯಲ್ಲಿ ಜನ್ಮವೆತ್ತಿದ್ದಕ್ಕೆ ಸಾರ್ಥಕರಾದೇವು ಎಂಬದಾಗಿ ನಂಬುತ್ತೇನೆ.

ವಿದ್ಯಾಭಿಮಾನಿ

ಮೈಸೂರು ಸಂಸ್ಥಾನದ ದಿವಾನ ಸಾಹೇಬರವರ ಸನ್ನಿಧಾನಂಗಳಲ್ಲಿ

—o—

ಮೈಸೂರು ಚಾಮುಂಡೀಪುರದಲ್ಲಿರುವ ಮುಲ್ಲಹ್ ಆರ್. ವೆಂಕಟರಾಮಯ್ಯನ ವಿಜ್ಞಾಪನಾ—

ಮೈಸೂರು ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ 1919 ನೆ ಜೂಲೈ ಗುರ್ರೆ ಲಾಗಾಯಿತು ಜ್ಯುಡಿಷಿಯೇಲ್ ಅಧಿಕಾರವನ್ನು ರೆವೆನ್ಯು ಅಧಿಕಾರಿಗಳ ಕೈತಪ್ಪಿಸಿ ಬೇರೆ ಕೊಡಲು ಗೌರ್ನಮೆಂಟಿನವರು ಹುಕುಂ ಮಾಡಿರುತ್ತಾರೆ.

ಹೋದ ವರುಷ ಬೆಂಗಳೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳು ಈಮೇರೆ ಏಂಗಡಿಸಲ್ಪಟ್ಟಿವೆ. ಆ ಡಿಸ್ಟ್ರಿಕ್ಟುಗಳಲ್ಲಿ ರೆವಿನ್ಯೂ ಅಧಿಕಾರಿಗಳಿಗೆ ಹೆಚ್ಚು ಕೆಲಸವು ಕಮ್ಮಿಮಾಡಲ್ಪಟ್ಟದ್ದರಿಂದ, ಪ್ರಜೆಗಳಿಗೆ ಸಂಪದಭ್ಯುದಯ ವಿಷಯದಲ್ಲಿ ಏನುಸೌಕರ್ಯ ಉಂಟಾಯಿತೆಂಬುದು ವ್ಯಕ್ತಪಡಲಿಲ್ಲ, ಸ್ವಾಮಿ.

ಹೀಗಿರುವಲ್ಲಿ ಪುನಃ ಹೆಚ್ಚಾಗಿ ಎರಡು ಡಿಸ್ಟ್ರಿಕ್ಟಿಗೆ ಈ ಆಚರಣೆಯು ತರಲ್ಪಟ್ಟಿರುವದು ನೋಡಿದರೆ ಸರ್ಕಾರದವರು ಖರ್ಚು ಬಾಬು ಹೆಚ್ಚು ಮಾಡುತ್ತಾರೆಂತಲೂ, ಕಮ್ಮಿ ಮಾಡುವ ವಿಚಾರದಲ್ಲಿ ಗಮನ ಕೊಡುವುದಿಲ್ಲವೆಂತಲೂ, ಆಡಿಕೊಳ್ಳುವ ಪ್ರಜೆಗಳ ಮಾತು ಇನ್ನೂ ಹೆಚ್ಚುವುದಕ್ಕೆ ಅವಕಾಶವಾಗಿದೆ, ಸ್ವಾಮಿ.

ಆದ್ದರಿಂದ ನಾವು ಹಿಂದೆ ಜ್ಯುಡಿಷಿಯಲ್ ಮತ್ತು ರೆವಿನ್ಯೂ ವಿಭಾಗ ವಿಚಾರದಲ್ಲಿ ಗೌರ್ನಮೆಂಟಿಗೆ ಬರದಿರತಕ್ಕ ವಿಜ್ಞಾಪನೆಯನ್ನು ಗೌರ್ನಮೆಂಟಿನವರು ಪುನಃ ಪರ್ಯಾಲೋಚಿಸಬೇಕೆಂತಲೂ, ಜ್ಯುಡಿಷಿಯಲ್ ಮತ್ತು ರೆವಿನ್ಯೂಬಾಬನ್ನು ಬೇರೆಬೇರೆ ಮಾಡಿರುವ ಡಿಸ್ಟ್ರಿಕ್ಟುಗಳಲ್ಲಿ ಈ ಕೆಳಗೆ ಕಂಡ ನಡವಳಿಕೆ ಕ್ರಮಗಳು ಜರಗುವಂತೆ ಏರ್ಪಡಿಸಬೇಕೆಂತ ಪ್ರಾರ್ಥಿಸುತ್ತೇನೆ, ಸ್ವಾಮಿ.

1. ಡಿಸ್ಟ್ರಿಕ್ಟು, ಸಬ್‌ಡಿವಿಜನ್, ತಾಲ್ಲೂಕುಗಳಲ್ಲಿ ಎಲ್ಲಾ ಬಾಬುಗಳಿಗೂ ಅಂದರೆ ರೆವಿನ್ಯೂ, ಮ್ಯಾಜಿಸ್ಟ್ರೇಟಿವ್, ಮಿನ್ಸ್ಟೀರಿಯಲ್, ದರಖಾಸ್ತು, ರಾಜೀನಾಮೆ, ವರ್ಗರಾಜೀನಾಮೆ, ನಾಂತಬ್ದುಲ್, ವಗೈರೆ ವಿಷಯಗಳಿಗೆ ಬೇರೆಬೇರೆ, ಜಂಜರ್ ಸಂಬರನ್ನು ಒಂದೇ ರೀತಿ ಕೊಡುತ್ತಾ ಬರಬೇಕು. ಆಯಾಯ ರಿಕಾರ್ಡುಗಳು ಆಯಾಯ ಅಧಿಕಾರಿಗಳಿಂದ ಸ್ವೀಕರಿಸಲ್ಪಟ್ಟು ಅವರಿಂದಲೇ ತೀರ್ಮಾನಿಸಲ್ಪಡಬೇಕು.

(2) ಒಬ್ಬೊಬ್ಬ ಅಧಿಕಾರಿಯಿಂದ ಮಾಡಲ್ಪಟ್ಟ ತೀರ್ಮಾನದ ಮೇಲೆ ನಷ್ಟಪಟ್ಟವರು ಸೆಕೆಂಡ್ ಅಪೀಲ್ ಮಾಡಿಕೊಳ್ಳಲು ಅವಕಾಶಮಾಡಲ್ಪಡಬೇಕು.

(3) ಸುಪೀರಿಯರ್ ಅಧಿಕಾರಿಗಳಿಂದ ಕೆಳಗಿನ ಅಧಿಕಾರಿಗಳಿಗೆ ಕೊಡಲ್ಪಡುವ ಆರ್ಡರೆಲ್ಲವೂ ಆಯಾಯ ಕಟ್ಟಿನಲ್ಲಿ ನಡಿಸಿರುವ ಆರ್ಡರಿನಂತೆ ಬಂದ ಕಾಪಿಯಾಗಿರಬೇಕೇ ಹೊರತು ಅಸಲ್‌ಕಳುಹಿಸಲ್ಪಡಕೂಡದು. ಅಂಥ ಆರ್ಡರಿಗೆ ಬರುವಪೋರ್ಟುಗಳು ಸರಿಯಾದ್ದೆಂದು ಪಾರ್ಟಿಗಳೆಂದಲೂ ವೇಲ್ಪಟ್ಟ ಆಫೀಸರಿಂದಲೂ, ಒಪ್ಪಲ್ಪಟ್ಟ ಮೇಲೆ ಅದು ಕಟ್ಟಿಗೆ ಸೇರಿಸಲ್ಪಟ್ಟು ಪಬ್ಲಿಕ್ ಎಂದು ಭಾವಿಸಲ್ಪಡಬೇಕು. ಅನಂಗೀಕಾರವಾದ ರಿಪೋರ್ಟು ಯಾ ಕಮಿಷನ್ ರಿಪೋರ್ಟುಗಳು ವಜಾ ಮಾಡಲ್ಪಟ್ಟಿದ್ದೆಂದು ಆಯಾಯ ಆಫೀಸರಿಂದ ಷರಾ ಮಾಡಲ್ಪಟ್ಟು ತೀರ್ಮಾನವಾದ ಒಂದು ವರ್ಷಾನಂತರ ಸುಡಲ್ಪಡುವ ರಿಕಾರ್ಡಿಗೆ ಸೇರಿಸಲಡ್ಪಬೇಕು. ಯಾವಸಂದರ್ಭದಲ್ಲೂ ಇಂಥವುಗಳ ಕಾಪಿಗಳು ಕೊಡಕೂಡದು.

(4) ಒಟ್ಟಿನಲ್ಲಿ, ಎಲ್ಲಾ ನಡವಳಿಕೆಗಳು ಮ್ಯುನಿಸಿಫ್ ಕೋರ್ಟು, ಸಬ್ ಕೋರ್ಟು, ಡಿಸ್ಟ್ರಿಕ್ಟು ಕೋರ್ಟು, ಇವುಗಳಲ್ಲಿ ನಿಯಾಮಕವಾದ ರೀತಿಯಲ್ಲಿ, ಈ ರೆವಿನ್ಯೂ ಇಲಾಖೆಯಲ್ಲಿಯೂ, ತಾಲ್ಲೂಕು, ಡಿವೀಜ್, ಡಿಸ್ಟ್ರಿಕ್ಟುಗಳ ನಡವಳಿತವು ನಡೆಯುವಂತೆ ಮಾಡಲ್ಪಡಬೇಕು.

(5) ಈ ಮೇಲ್ಕಂಡ ರೀತಿ ಮೇಲ್ವಿಂಗ್ತಿಯನ್ನು [illegible] ಕೆಲಸ ನಡಿಸುತ್ತಾ ಹೋಗುವಲ್ಲಿ ಉಂಟಾಗುವತೊಂದರೆಗಳು ಆನುಭವದಾರರಾದ ಆಫೀಸರುಗಳು ತಮ್ಮ [illegible] ರ್ಟರ್ಲಿಗಳಲ್ಲಿ ಸರ್ಕಾರಕ್ಕೆ ತಿಳಿಸುತ್ತಾ ಒಂದು [illegible] ಕೂಲಮಾಡಬೇಕು.

ಸತ್ಯವಾದಿ 9 ನೇ ಜುಲೈ 1919.

ಸಮಾಧಾನ.

—o—

ಎತ್ತ ನೋಡಿದರೂ ಆನಂದ! ಎಲ್ಲಿ ಹೋದರೂ ಸಂತೋಷ!! ಜಗತ್ತೆಲ್ಲಾ ನಗುತ್ತಿರುವುದು!!! ಕ್ಷಾಮ! ಊಟಕ್ಕಿಲ್ಲ!! ಊಟಕ್ಕಿಲ್ಲವೆಂಬ ದುಃಖವು ಇಲ್ಲ!! ಜಗತ್ತೆಲ್ಲಾ ಶಾಂತಿಮಾಯವಾಗಿದೆ ಎಂಬ ಸಂತೋಷವು ಹೆಚ್ಚಿದೆ. ಶಾಂತಿಗೆ ಕಾರಣಭೂತವಾದ, ಜರ್ಮನರುಕರಾರಿಗೆ ರುಜು ಹಾಕಿದರೆಂಬ ಮಾತು ಹಿಂದಿನ ಸಂಚಿಕೆಯಲ್ಲಿ ತಿಳಿಸಿರುತ್ತೇನೆ. ಆಹಾ! ಕಷ್ಟ!! ಕಷ್ಟ!!! ಯಾವ ಜನಾಂಗದವರೂ ಇತರ ಜನಾಂಗದ ಮೇಲೆ ಮಾತ್ಸರ್ಯವನ್ನು ಬೆಳಿಸಿದ್ದೇಯಾದರೆ ರಾಜ್ಯಭ್ರಷ್ಟರಾಗುತ್ತಾರೆ, ಎಂಬ ವಿಷಯದಲ್ಲಿ ಏನಾದರೂ ಸಂದೇಹವಿದೆಯೇ! ಸರ್ವಥಾ ಇರುವದಿಲ್ಲ, ಈ ವಿಚಾರದಲ್ಲಿ ಜರ್ಮನರು ಸಾಕ್ಷಿಯಾಗಿದ್ದಾರೆ. ಜರ್ಮನರು ಎಷ್ಟು ದೇಶಗಳನ್ನು ಜೂರುಮಾಡಿಕೊಂಡರು, ? ಎಷ್ಟು ಪ್ರಾಣಗಳನ್ನು ಕಳಕೊಂಡರು! ರಣರಂಗವನ್ನೆಲ್ಲಾ ರಕ್ತದಿಂದ ತೊಳಿಯಲಿಲ್ಲವೇ? ಯಾವದೂ ಸಫಲವಾಗಲಿಲ್ಲ; ಇದಕ್ಕೆಲ್ಲಾ ಅವರ ಅಹಂಕಾರ, ಮಾತ್ಸರ್ಯಗಳೇ ಕಾರಣವಾಗಿವೆ ಮಿತ್ರಮಂಡಲಿಯವರು ಜಯವನ್ನು ಹೊಂದಿದರೆಂದು ನಾವು ತುಂಬಾ ಸಂತೋಷಪಡಬೇಕಾಗಿದೆ. ಆದರೆ ನಮ್ಮ ಪಂಗಡದವರಿಗೆ ಜಯವಾಯಿತೆಂದು, ನಾವು ಸರ್ವಥಾ ಅಹಂಕಾರವನ್ನು ಮಾಡಬಾರದು ಮಾಡಿದ್ದೇಯಾದರೆ ನಾವೂ ಕೂಡ ಜರ್ಮನಿಯವರಂತೆಯೇ ಅಧಃಪತನವನ್ನು ಹೊಂದಬೇಕಾಗುವದು, ಎಂಬ ವಿಷಯವನ್ನು ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳತಕ್ಕದ್ದು.

ಪ್ರಕೃತ ಎಲ್ಲಾ ಜನಾಂಗದವರೂ ಶಾಂತಮನಸ್ಸುಳ್ಳವರಾಗಿ ಇರುವದು ಮಾತ್ರವಲ್ಲದೆ, ಇನ್ನು ಮುಂದಕ್ಕೆ ಇಂಥಾ ಅಘೋರಪ್ರಳಯಪ್ರಾಯವಾದ ಯುದ್ಧವು ಆರಂಭಮಾಡದಿರುವದಕ್ಕೆ ಬೇಕಾದ ಏರ್ಪಾಡು ಮಾಡುವರೆಂಬುದನ್ನು ಕೇಳಿ ಲೋಕವೆಲ್ಲಾ ಸಂತೋಷದಿಂದ ಹಿಗ್ಗುತ್ತಿರುವದು.

ಈ ಭಯಂಕರವಾದ ಮಹಾಯುದ್ಧವು ಜಗತ್ತಿನ ನೆಮ್ಮದಿಗೆ ನಾಶಕರವಾದುದು ಮಾತ್ರವಲ್ಲದೆ ಅನೇಕ ನಷ್ಟಗಳಿಗೆ ಅವಕಾಶವನ್ನು ಕೊಡಲು ಕಾರಣವಾಯಿತು. ಈ ಮಹಾ ಯುದ್ಧಕ್ಕೆ ಪ್ರಸಕ್ತಿಯೇ ಇಲ್ಲದಿದ್ದರೆ ಲೋಕವೆಲ್ಲಾ ಎಷ್ಟು ನೆಮ್ಮದಿಯಾಗಿರುತ್ತಿತ್ತೋ ಮತ್ತು ಎಷ್ಟು ಅಭಿವೃದ್ಧಿಯನ್ನು ಹೊಂದುತ್ತಿತ್ತೊ ಅದನ್ನು ಹೇಳಲು ಸಾಧ್ಯವಿಲ್ಲ. ಎಷ್ಟೋಸ್ಥಳಗಳಲ್ಲಿ ಅನೇಕ ಕಾರಖಾನೆಗಳೂ ಕೈಗಾರಿಕೆಗಳೂ ನಿಲ್ಲಿಸಲ್ಪಟ್ಟು ನಿದ್ರಾದೇವಿಯನ್ನು ಪಡೆದುವು; ಅವುಗಳೆಲ್ಲಾ ಸದ್ದಿಲ್ಲದೆಯೇ ಎಚ್ಚೆತ್ತು, ತಮ್ಮ, ಕೆಲಸಗಳನ್ನು ಆಲಸ್ಯವಿಲ್ಲದೆ ಮಾಡ್ಯಾವೆಂಬದಾಗಿ ನಾವು ದೃಢವಾಗಿ ಹೇಳಬಲ್ಲೆವು ಅದು ಹಾಗಿರಲಿ!

ಪ್ರಕೃತ ಈ ಯುದ್ಧದಲ್ಲಿ ಇಂಡಿಯಾದೇಶದ ಸೈನ್ಯವು ಎಷ್ಟೋ ಸಹಾಯವನ್ನು ಮಾಡಿರುತ್ತದೆ. ಎಲ್ಲಿ ನೋಡಿದರೂ ರಕ್ತಪ್ರಳಯ, ಅಲ್ಲಲ್ಲಿ ಕುದುರೆಗಳ ಓಡಾಟ, ಜನಗಳು ಸತ್ತುಬಿಳೋಣ, ಆಹಾ! ಇದೆನ್ನೆಲ್ಲಾ ನೋಡಿದರೆ, ನಮ್ಮ ಇಂಡಿಯಾ ಸೈನ್ಯವು ಜಾರ್ಜ್ ಸಾವ-ಭೌಮರ ಮೇಲೆ ಎಷ್ಟು ಪ್ರೀತಿಯನ್ನು ಇಟ್ಟಿರುವದೋ ಅದನ್ನು ವರ್ಣಿಸಲು ಸಾಧ್ಯವೇ ಇಲ್ಲ. ಮತ್ತು ಇಂಡಿಯಾ ದೇಶದಲ್ಲಿರುವ ಎಲ್ಲಾ ಪ್ರಜಾಳೂ, ಬರಿದಾಗುತ್ತೆಂಬಂತು. ಆ ಯುದ್ಧಕ್ಕೋಸ್ಕರ ಇಂಡಿಯಾ ಸುವರ್ಣ ದೃಷ್ಟಿಯನ್ನು ತಪ್ಪದೆ ಆಗಿಂದಾಗ್ಗೆ ಮಾಡುತ್ತಲೇ

ಲ್ಲಾ ಸಹಾಯವನ್ನು ಮಾಡಿದ ನಮ್ಮ ಇಂಡಿಯಾ ಜನಾಂಸ್ಮರಾಗಿಯೂ, ಜಯಶಾಲಿಯಾಗಿಯೂ, ಇರುವ ಸಾ ಚಕ್ರವರ್ತಿಯವರು ಭಾರತೀಯರ ಆಶಯವನ್ನು ದ್ದಾರೆಯೇ? ಈ ವಿಷಯದಲ್ಲಿ ಮತ್ತೊಮ್ಮೆ ಸಮಾ

(6) ತಾಲ್ಲೂಕು ಎಕನಾಮಿಕ್ ಕಾರ್ಫರೆನ್ಸಿನ ಕಮಿಟಿ ಮೀಟಿಂಗೂ, ತಾಲ್ಲೂಕು ಬೋರ್ಡು ಮೀಟಿಂಗೂ ಈಗಿನಂತೆ ತಾಲ್ಲೂಕು ಲ್ಲಾಧ್ಯಕ್ಷತೆಯಲ್ಲೇ ನಡೆಯುವುದು. ಪ್ರಕೃತ ಕಾಲಕ್ಕೆ ಅನುಕೂಲವಾದ್ದರಿಂದ ಅವರು ಆಯಾ ತಿಂಗಳಿಗೆ ಗೊತ್ತಾದ ತಾರೀಖಿನೊಳಗೆ ಮೀಟಿಂಗ್ ಮಾಡುವ ಕ್ರಮವನ್ನು ತಪ್ಪದೆ ಇರುವಂತೆಯೂ ಪ್ರತಿ ಡಿಸ್ಟ್ರಿಕ್ಟು ಅಥವಾ ಸಬ್‌ಡಿವೀಜನ್‌ಗಳಲ್ಲಿಯೂ, ಗೊತ್ತಾದ ತಾರೀಖಿನಲ್ಲಿ ಬೇರೆಬೇರೆಯಾಗಿ ಈ ಮೀಟಿಂಗುಗಳು ನಿಯತವಾಗಿ ನಡೆಸಲ್ಪಡಬೇಕೆಂದು ಏರ್ಪಾಡಾಗಬೇಕು.

ಮೇಲ್ಕಂಡ ರೀತಿ ಕ್ರಮವಾಗಿ ಏರ್ಪಾಡಾದ ಹೊರತು ಜ್ಯುಡಿಷಿಯಲ್ ರೆವಿನ್ಯೂವನ್ನು ಪ್ರತ್ಯೇಕಮಾಡಿದ ಫಲಪ್ರಾಪ್ತಿಯಾಗುವದಿಲ್ಲ. ಆದ್ದರಿಂದ ಸರ್ಕಾರದವರು ದಯವಿಟ್ಟು ಈ ರೀತಿ ನಡಿಸಿ ಪ್ರಜಾಕ್ಷೇಮವುಂಟಾಗುವಂತೆ ಮಾಡಿಸಬೇಕೆಂತ ಪ್ರಾರ್ಥಿಸುತ್ತೇನೆ, ಸ್ವಾಮಿ.

Mysore
8-7-1919

ಪ್ರಜಾಪಿತೈಷಿ.

ತಾಲ್ಲೂಕು ವರ್ತಮಾನಗಳು.

—:o:—

ಕೊಪ್ಪ.

ಸಿನ್ನೆ ದಿನ ನಡೆದ ಎಲೆಕ್ಷನ್‌ನಲ್ಲಿ ಮ|| ಹೊಸಕೊಪ್ಪ ಕೃಷ್ಣರಾವ್, ಮ|| ಕಿಗ್ಗದ ಜನ್ನಕೇಶವರಾವ್, ಮ|| ಹಾಲಗಾರರು ಹುಚ್ಚರಾವ್, ಈ ಮೂರು ಜನಗಳು ಈ ತಾಲ್ಲೂಕಿನಿಂದ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಜುನಾಯಿಸಲ್ಪಟ್ಟರು. ಬ್ರಾಹ್ಮಣೇತರರು ಒಬ್ಬರಾದರೂ ಜುನಾಯಿಸಲ್ಪಡಲಿಲ್ಲವೆಂದು ಕೆಲವರಿಗೆ ಕೊಂಚ ಅಸಮಾಧಾನ ಉಂಟಾದಂತೆ ತೋರುತ್ತೆ. ಬ್ರಾಹ್ಮಣೇತರರ್ಯಾರೂ ಮೆಂಬರುಗಳಾಗಲು ಹೀಗಾಗಲು ಅಪ್ಲಿಕೇಷನ್‌ಗಳನ್ನು ಕೊಟ್ಟಿರಲಿಲ್ಲವಾದುದೇ ಕಾರಣ ಇನ್ಯಾವ ಕಾರಣವೂ ತೋರಿಬರುವದಿಲ್ಲ. ಆದುದರಿಂದ ಅಸಮಾಧಾನಕ್ಕೂ ಕಾರಣವೆಲ್ಲಿರುವುದು?

ವರ್ತಮಾನಗಳು.

—:o:—

ತಾ|| ೨೫ ಜೂನ ದಿವಸ ಮುಂಬಯಿಯಲ್ಲಿ ಕಾಂಕ್ರೀಟಿನಿಂದ ಕಟ್ಟಿದ ಮೂರಂತಸ್ತಿನ ಮನೆಯು ಸುಟ್ಟು ೧೫೦೦೦೦ ರೂಪಾಯದ ನಷ್ಟ ನಷ್ಟವಾಯಿತು.

ಬರೋದಾ ಸಂಸ್ಥಾನದಲ್ಲಿ ಒಂದು ವಿಶ್ವವಿದ್ಯಾಲಯವನ್ನು (ಯನಿವರ್ಸಿಟಿಯನ್ನು) ಸ್ಥಾಪಿಸುವ ವಿಚಾರ ನಡೆದಿದೆ. ಗ್ರಹವೃತ್ತಿಯನ್ನು ಕಂಡು ಸ್ವವೃತ್ತಿಯುಂಟಾಗುತ್ತಿರುವುದೆಂದು ಹೇಳುತ್ತಾರಷ್ಟೆ? ಮೈಸೂರಿನವರುಸ್ಥಾಪಿಸಿದ ಯುನಿವರ್ಸಿಟಿಯ ಪ್ರತಾಪವು.....—..... ಬರೋಡೆಯಲ್ಲಿ ಒಂದು ಯುನಿವರ್ಸಿಟಿಯ ಸ್ಥಾಪನೆ ಯಾಗಬೇಕೆಂದು ಅಲ್ಲಿಯ ಸರಕಾರದವರು ವಿಚಾರ ನಡಿಸಿದ್ದು ಬನಾರಸ ಹಿಂದೂ ಯುನಿವರ್ಸಿಟಿಯ ಪ್ರೊಫೆಸರ ಶೇಷಾದ್ರಿ ಮುಂತಾದವರು ಬರೋಡೆಯಲ್ಲಿ ಯುನಿವರ್ಸಿಟಿಯ ಸ್ಥಾಪನೆ ಯಾಗಬೇಕೆಂಬ ಅಭಿಪ್ರಾಯಗಳನ್ನು ಕೊಟ್ಟಿರುತ್ತಾರೆ.

ಪ್ರಯಾಗದ ಬಳಿಯಲ್ಲಿ ಗಂಗಾ ಯಮುನಾ ನದಿಗಳ ಸಂಗಮವಿದ್ದು. ಈ ವರ್ಷ ಗಂಗೆಗೆ ಹೆಚ್ಚಾದ ಪೂರ ಬಂದಿದ್ದರಿಂದ ಆ ನದಿಯ ಪ್ರವಾಹವು ಯಮುನೆಯ ನೀರನ್ನು ಹಿಂದಕ್ಕೆ ತಡೆದು ನಿಲ್ಲಿಸಿತು. ತಡೆದು ನಿಂತ ಯಮುನೆಯ ಮಹಾ ಜಲವು ಗಂಗೆಯ ಪ್ರವಾಹವನ್ನು ಅಡ್ಡಗಟ್ಟಿದ್ದರಿಂದ ಗಂಗಾ ಪ್ರವಾಹವು ಕೊಂಚ ಪಶ್ಚಿಮವಾಹಿನಿಯಾಗಿ ಹರಿಯಲಾರಂಭಿಸಿತು. ಗಂಗೆಯು ವಸ್ತುತಃ ಪೂರ್ವವಾಹಿನಿಯಾಗಿದ್ದು ಅಲ್ಲಿಯಾದರೊತ್ತಟ್ಟಿಗೆ ಅದು ವಿಪರೀತವಾಗಿ (ಪಶ್ಚಿಮವಾಹಿನಿಯಾಗಿ) ಹರಿದರೆ ಅದೊಳ್ಳೆ ಪವಿತ್ರವಾದ ತೀರ್ಥವೆನಿಸುವದುಂಟು. ಸಮ್ಮಲ್ಲಿ ಕೃಷ್ಣೆಯು ದಕ್ಷಿಣವಾಹಿನಿಯಾಗಿದ್ದು ಆದರ ಪ್ರವಾಹವು ಉತ್ತರವಾಹಿನಿಯಾಗಿ ಕ್ವಚಿತ್ ಸ್ಥಳದಲ್ಲಿ ಹರಿದರೆ (ಅದಕ್ಕೆ ಸ್ತ್ರೀ ಜನರು "ಉತ್ತರಾಣಿ" ಎಂದೆನ್ನುತ್ತಾರೆ) ಅದು ಪವಿತ್ರ ತೀರ್ಥವೆಂಬುದನ್ನು ನಾವು ಕೇಳುತ್ತೇವಷ್ಟೆ? ಆ ಮೇರೆಗೆ ಪ್ರಯಾಗದಲ್ಲಿ ಗಂಗೆಯು ಪಶ್ಚಿಮವಾಹಿನಿಯಾಗಿರುವ ವರ್ತಮಾನವನ್ನು ಕೇಳ ಲಕ್ಷಾನುಧಿ ಜನ ತೀರ್ಥಯಾತ್ರಾಪ್ರೇಯಾಗ ಕ್ಷೇತ್ರಕ್ಕೆ ಮುಕ್ಕರಿಯುತ್ತಿರುವರು. ಬ್ರಾಹ್ಮಣರಿಗೆ ತುಪ್ಪರೊಟ್ಟಿ ರೈಲಿನವರಿಗೆ ರೊಕ್ಕದ ಮೊಟ್ಟೆ?

ಸ್ತ್ರೀಯರಿಗೆ ಕೇಶಭೂಷಣಣವೇಭೂಷಣ.

ಕಾಮಿನಿಯ ತೈಲ. [ರಿಜಿಸ್ಟರ್ಡ]

ಈ ತೈಲವು ಪರಿಶುದ್ಧವಾದ ವತ್ತು ಅಮೂಲ್ಯವಾದ ಸುದಾರ್ಥಗಳಿಂದ ಮಾಡಲ್ಪಟ್ಟದೆ ಕೂದಲು ಉದುರುತ್ತಿದ್ದರೆ ಅದನ್ನು ನಿಲ್ಲಿಸುತ್ತದೆ. ತಲೆಯಲ್ಲಿ ಹಸ್ನಾ ಬಾರದಂತೆ ಕಾಪಾಡುತ್ತದೆ ಕೇಶರಾಶಿಯನ್ನು ಕೋಮಲವಾಗಿ ನರ್ತಿಸುತ್ತದೆ ಮತ್ತು ಬೆಳೆ ಕೂದಲುಗಳನ್ನೂ ಕೂದಿನಿಜವಾದ ಕಪ್ಪು ಬಣ್ಣಕ್ಕೆ ತರುತ್ತದೆ.

ಈ ತೈಲವುಮೆದುಳನ್ನು ಉತ್ತಮಸ್ಥಿತಿಯಲ್ಲಿಡುವುದರಿಂದಲೂ ಜ್ಞಾಪಕಶಕ್ತಿಯನ್ನು ಊರ್ಜಿತಸ್ಥಿತಿಯಲ್ಲಿರುವುದರಿಂದಲೂ, ಮತ್ತು ತಲೆಯನ್ನು ಶುಭ್ರವಾಗಿಡುವುದರಿಂದಲೂ, ಕಾರ್ಯನಿರ್ವಾಹಕರಿಗೂ, ಆಲೋಚನಾಶಕ್ತಿಯಿಂದ ಕೆಲಸ ಮಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ. ಎಲ್ಲರಿಗೂ ಬಹುಪ್ರಯೋಜನಕರವಾಗಿರುತ್ತದೆ. ಇವಲ್ಲದೆ ಇದು ಪನೋರಮಸವನ್ನುಂಟುಮಾಡುವಂತ ಹ ಇಂಪಾದ ಸುವಾಸನೆಯನ್ನ ಹೊಂದಿರುತ್ತದೆ. ಇವರ ಶ್ರೇಷ್ಠತೆಗೆ ಲಸುವಾಗಿ, ಮೈಸೂರ್ನ ವಸ್ತುಪ್ರದರ್ಶನದಲ್ಲಿ ಒಂದು ಚಿನ್ನದ ಪದಕವನ್ನು ಬಹುಮಾನವಾಗಿ ಕೊಟ್ಟಿರುತಾರೆ. ಸಮಯವನ್ನು ಮಾತ್ರ ಕಳೆದುಕೊಳ್ಳಬೇಡಿರಿ. ಎಲ್ಲೆಲ್ಲಿಯೂ ಮಾರಲ್ಪಡುತ್ತದೆ

ಕ್ರಯ ಸೀಸೆಗೆ ೧–೦–೦; ವಿ. ಪಿ. ಚಾರ್ಜು ೧ ಕ್ಕೆ ೬ ಆಣೆ

೩ ಕ್ಕೆ ೨–೧೦–೦. ವಿ. ಪಿ. ಛಾರ್ಜು ೩ ಕ್ಕೆ ೧೪ ಆಣೆ.

ಶಿಟೋದಿಲ್‌ಬಹಾರ್ (ರಿಜಿಸ್ಟರ್ಡ್)

ಸುವಾಸನ ತೈಲಗಳಲ್ಲಿ ಅತ್ಯಂತಶ್ರೇಷ್ಟವಾದುದು ಸಿದು ಅನೇಕ ಬಿರುದುಗಳನ್ನೂ ಯೋಗ್ಯತಾಪತ್ರಗಳನ್ನೂ ಹೊಂದಿರುತ್ತದೆ ಇದು ಎಲ್ಲಾ ವಿಧವಾದ ಸಾದಕಸುಪಾರ್ದಗಳಿಂದ ಆಗಿ ಜೀರಿಹೂವಿನ. ಬಲ್ಲರೂ ಸುಲಭವಾಗಿ ಉಪಯೋಗಿಸಬಹುದು. ಜಾಜಿ ಮಲ್ಲಿಗೆ ಇವೇ ಮೊದಲಾದ ಹೂಗಳಿಂದ ಕಸೂರಾಗಿರುವು. ಈಗತಾನೆ ಅರಳಿದ ಕುಸುಮವು ಬೇರೆನಂತಹ ಇದರಿಂದ ಸನೆಯನ್ನು ಸಂತೋಷಪಡಿಸಿ. ಇದರ ಸಿಕ್ಕವಾದ ಗುಣಗಳ ಇದಕ್ಕೆ ಯಾವುದೂ ಸಮಾನವಿಲ್ಲ. ಕ್ರಯ ೧ ಡ್ರಾಮಿನ ಸೀಸೆ ೧ ಕ್ಕೆ ೧೨ ಆಣೆ; ೨ ಡ್ರಾಮಿನ ಸೀಸೆ ೧ ಕ್ಕೆ ೧–೪–೦; ೪ ಡ್ರಾಮಿನ ಸೀಸೆ ೧ ಕ್ಕೆ ೨ ರೂಪಾಯಿ. (ವಿ. ಪಿ. ಖರ್ಚು ಬೇರೆ.)

ಪ್ರತಿಕಟ್ಟಣದಲ್ಲಿಯೂ ಪ್ರಸಿದ್ಧವಾದ ಪ್ರತಿ ಅಂಗಡಿಯಲ್ಲಿಯೂ ಸಿಕ್ಕುತ್ತದೆ. ಕೊಂಡುಕೊಳ್ಳುವಾಗ ಸೀಸೆಯಮೇಲೂ ಮತ್ತು ವಾಸನೆಯ ಕಾರ್ಡಿನಮೇಲೂ "ಶಿಟೋದಿಲ್ ಬಹಾರ್" ಎಂದು ಬರೆದಿರುವುದನ್ನೇ ನೋಡಿ ಕೊಳ್ಳಿರಿ.

ಅಂಗ್ಲೋ ಇಂಡಿಯನ್ ಡ್ರಗ್ ಮತ್ತು ಕೆಮಿಕಲ್, ಕಂಪೆನಿ

ನಂ 155 ಜುಮ್ಮಾಮಸೀದಿ ರೋಡ್ ಬಾಂಬೆ.

ಚಂದಾದಾರರಲ್ಲಿ ವಿಜ್ಞಾಪನೆ.

ವರ್ಷಗಡವಾರರ ವಾಯಿದೆಯು ಪೂರ್ತಿಸುವುದಕ್ಕೆ ಮುಂಚೆ ತಿಳಿಸಿ ಕಂತರ ವಿ. ಪಿ. ಮಾಡಲು ಪದ್ಧತಿಯಿದೆ.

ಹಾಗೆ ತಮ್ಮಿಂದ ಯಾವ ಉತ್ತರವೂ ಬಾರದಿದ್ದಲ್ಲಿ ಪತ್ರಿಕೆಯನ್ನು ಪ್ರೋತ್ಸಾಹಿಸಲು ಇಚ್ಛೆ ಇದೆಯೆಂದು ನಂಬಿ ವಿ. ಪಿ. ಯನ್ನು ರವಾನಿಸುತ್ತೇವೆ.

ಯುದ್ಧದ ದೆಸೆಯಿಂದ ಕಾಗದದ ಬೆಲೆಯು ಮಿತಿಮೀರಿ ಹೋಗಿರುವುದರಿಂದ ವಿ. ಪಿ. ಯನ್ನು ವಾಪಸ್ ಮಾಡಿದರೆ ತುಂಬಾ ನಷ್ಟಕ್ಕೆ ಕಾರಣವಾಗುತ್ತದೆಯಾದ್ದರಿಂದ ವಿ. ಪಿ. ಯನ್ನು ಸಾದರದಿಂದ ಸ್ವೀಕರಿಸಬೇಕಾಗಿ ಬೇಡುತ್ತೇವೆ. ಸತ್ಯವಾದಿ ಮ್ಯಾನೇಜರ್.

ಸಾಧ್ವೀ.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವ ವಾರಪತ್ರಿಕೆ

ಇದರಲ್ಲಿ ರಾಜಕೀಯ ವಿಷಯಗಳೂ, ವ್ಯಾಪಾರ, ಕೈಗಾರಿಕೆ ಸ್ತ್ರೀವಿದ್ಯಾಭ್ಯಾಸ, ಉಪಯುಕ್ತವಾದ ಉಪನ್ಯಾಸಗಳೂ ಇವೇ ಮೊದಲಾದ ಅನೇಕ ವಿಷಯಗಳು ಒಳಗೊಂಡಿರುವ ವಾರಪತ್ರಿಕೆ.

ಜಂವಾ ವರ:—

	ಸ್ವದೇಶದವರಿಗೆ.	ಪರದೇಶದವರಿಗೆ. (ಪೋಸ್ಟಾಲ್ ಖರ್ಚಾಸಲು ಸೇರಿ)
ವರ್ಷಕ್ಕೆ	3—0—0	3—13—0
6 ತಿಂಗಳಿಗೆ	1—12—0	2—4—0
3 ತಿಂಗಳಿಗೆ	1—0—0	1—4—0
ಪ್ರತಿಪತ್ರಿಕೆ 1 ಕ್ಕೆ	0—1—0	0—1—3

ಮ್ಯಾನೇಜರ್ ಸಾಧ್ವೀ ಮೈಸೂರು.

ಕಾಮಶಾಸ್ತ್ರ, ಎನ್ನುವ ಶರೀರ ಮರ್ಮಶಾಸ್ತ್ರ.

ಸಂಸಾರದಲ್ಲಿ ಸ್ತ್ರೀ ಪುರುಷರುಗಳಿಗೆ ಬೇಕಾದ ಎಲ್ಲಾ ರಹಸ್ಯಗಳು ಮದುವೆ ಆಗಿರುವವರಿಗೂ ಇನ್ನು ಮೇಲೆ ಆಗುವವರಿಗೂ ತಿಳಿಸುವ ಎಲ್ಲ ಮರ್ಮಗಳೂ ಗರ್ಭಿಣಿ ಅನುಸರಿಸುವ ಎಲ್ಲಾ ವಿಷಯಗಳೂ ತಿಳಿದು ಉತ್ಪತ್ತಿ ವಿಧವೂ, ತಿಳಿದು ಸಂರಕ್ಷಣೆ ಚಿಕಿತ್ಸೆಗಳೂ, ಸ್ತ್ರೀಧರ್ಮ ನೀತಿಗಳೂ, ಆರೋಗ್ಯವಾಗಿಯೂ ದೀರ್ಘಕಾಲ ಆಯುಸ್ಸುಳ್ಳವರಾಗಿಯೂ, ಸುಖವಾಗಿಯೂ ಇರುವುದಕ್ಕೆ ಅನೇಕ ಮಾರ್ಗಗಳೂ, ಇನ್ನು ನೇಹದಲ್ಲಿ ಇರುವಪ್ರತಿಯೊಂದು ಭಾಗದ ವಿವರವನ್ನು ಚಿತ್ರಗಳೊಡನೆ ಸೊಗಸಾದ ಗ್ಲೇಜ್ ಕಾಗದದಲ್ಲಿ ಮುದ್ರಿಸಿರುತ್ತೆ. ಈತಾಸ್ತ್ರವು ಇಂಗ್ಲೀಷು, ಸಂಸ್ಕೃತದಲ್ಲಿ ಇದ್ದುದನ್ನು ಕನ್ನಡಕ್ಕೆ ಭಾಷಾಂತರ ಮಾಡಿರುತ್ತೆ. ಇಂಥಾ ಅಪರೂಪವಾದ ಪುಸ್ತಕವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಓದಿ ಆನಂದ ಹೊಂದುತ್ತಾರೆಂದು ನಂಬಿ ಇರುತ್ತೇವೆ. ಕ್ರಯ 12 ಆಣೆ. ತ್ವರೆಮಾಡಿರಿ.

ವಿಳಾಸ:—ಸುಹಾರಾಜ ಪುಸ್ತಕ ಶಾಲೆ,

12 ಅರುಣಾಚಲ ಮೊದಲಿ ಬೀದಿ, ಸಾಹುಕಾರ್ ಪೇಟೆ, ಮದರಾ

ಮಧುರ ಜುನ್ನಡಿ ಅಂಚಿನ ಸೀರೆ ಕ್ರಯ ರೂ, 4–4–0.

ಒಂದು ಸೀರೆಗೆ 1 ಎಲಕ್ಟ್ರಿಕ್ ಉಂಗರ ಇನಾಂ

ಇದು ಉಪಯೋಗಕ್ಕೆ ಫಲಪ್ರದಿಯಾಗಿಯೂ, ನಯವಾಗಿಯೂ, ಬೆಲೆ ಸುಲಭವಾಗಿಯೂ ಇದೆ. ಬಣ್ಣ ದು. ಸೀರೆಯ ಉದ್ದ 18 ಮೊಳ. ಸುಂದ ಒಂದನ್ನು ತರಿಸಿ ಪರೀಕ್ಷಿಸಿ.

ವಿಳಾಸ.—ವಿ. ಕೆ. ಪೆನ್ ಅಂಡ್

24. ನಾಯಕ ಮೇನ್ಸ್ಟ್ರೀ

Printed and Published at the
Works, Sayyaji Rao Road, Mysor